ಓ .ಎಸ್ ನಂಃ 46/2016
ಡಿಡಬ್ಲ್ಯೂಃ 1
ದಿನಾಂಕಃ 06.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಪಿ ವಕೀಲರಿಂದಃ</u>

ನಾನು ಎಸ್ ಎಸ್ ಎಲ್ ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ವಾದಿಗಳು ಎಷ್ಟು ಸ್ವತ್ತಿನ ಸಂಬಂಧ ಸಲ್ಲಿಸಿರುತ್ತಾರೆ ತಿಳಿದುಕೊಂಡಿರತ್ತೀರಾ ಎಂದರೆ ಹೌದು ಎನ್ನುತ್ತಾರೆ. ಒಟ್ಟು 21 ಐಟಂ ಸಂಬಂಧ ಎನ್ನುತ್ತಾರೆ. ಈ ಎಲ್ಲಾ ದಾವಾ ಸ್ವತ್ತುಗಳು ವಾದಿಗಳಿಗೆ ಮತ್ತು 1 ರಿಂದ 4 ನೇ ಪ್ರತಿವಾದಿಗಳಿಗೆ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಆಸ್ತಿಗಳು ಎಂದರೆ 2003 ರಲ್ಲಿ ದಾವಾ ಐಟಂ ನಂಬರ್ 1 ರಿಂದ 16 ರ ಸಂಬಂಧ ವಿಭಾಗವಾಗಿದ್ದು ಅದಕ್ಕೂ ಮುಂಚೆ ಒಟ್ಟು ಕುಟುಂಬದ ಆಸ್ತಿಯಾಗಿದ್ದು ಈಗ ಅವು ವಿಭಾಗವಾಗಿ ಒಟ್ಟು ಕುಟುಂಬದ ಆಸ್ತಿಯ ಅಸ್ತಿತ್ವವನ್ನು ಕಳೆದುಕೊಂಡು ಪ್ರತ್ಯೇಕವಾಗಿರುತ್ತದೆ ಎನ್ನುತ್ತಾರೆ. ನಾನು ವಿಭಾಗ ಪತ್ರವನ್ನು ನೋಡಿರುತ್ತೇನೆಯೇ ಅಂದರೆ ಹೌದು ಎನ್ನುತ್ತಾರೆ. ಅದನ್ನು ಯಾವ ದಿನಾಂಕ ಬರೆಯಲಾಗಿದೆ ಎಂದರೆ ದಿನಾಂಕ ನೆನಪಿಲ್ಲ 2003 ರಲ್ಲಿ ವಿಭಾಗ ಆಗಿದೆ ಎನ್ನುತ್ತಾರೆ. ಸದರಿ ಪತ್ರವನ್ನು ಯಾರು ಬರೆದಿರುತ್ತಾರೆ ಎಂದರೆ ನೊಂದಣಿ ಕಚೇರಿಯಲ್ಲಿ ನೊಂದಣಿ ಆಗಿದ್ದು ಯಾರು ಬರೆದಿರುತ್ತಾರೆ ಗೊತ್ತಿಲ್ಲ ಆ ಸಮಯದಲ್ಲಿ ನನ್ನ ಯಜಮಾನರು ಇದ್ದರು ಎನ್ನುತ್ತಾರೆ. ನನಗೆ ವಿಭಾಗ ಪತ್ರದ ಖುದ್ದು ಮಾಹಿತಿ ಇಲ್ಲವೇ ಅಂದರೆ ಬರೆದಿದ್ದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಎನ್ನುತ್ತಾರೆ. ಸದರಿ ಪತ್ರಕ್ಕೆ ಸಾಕ್ಷಿದಾರರಾಗಿ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ನಂಜುಂಡಪ್ಪ ಬಿನ್ ಮುನಿವೆಂಕಟಪ್ಪ , ನಂಜುಂಡಪ್ಪ ಬಿನ್ ಮುನಿಯಪ್ಪ , ಶ್ರೀನಿವಾಸ್ ಎನ್ನುತ್ತಾರೆ. 2003 ರ ವಿಭಾಗ ಪತ್ರ ನಿಪಿ 3 ರಲ್ಲಿ ಬಿ ಎಂ ಪಟ್ಟಾಭಿರಾಮಯ್ಯ ಎನ್ನುವವರು ಸಹ ಸಾಕ್ಷಿದಾರರು ಅವರು ನನ್ನ ತಂದೆ ಎಂದರೆ ಸರಿ .ನನ್ನ ತಂದೆ ಶಿಕ್ಷಕ ಎಂದರೆ ಸರಿ . ಅದೇ ರೀತಿ ಇನ್ನೊಬ್ಬ ಸಾಕ್ಷಿ ಮುನಿಯಪ್ಪ ಕೂಡ ಶಿಕ್ಷಕರು ಎಂದರೆ ಸರಿ. ಇನ್ನೊಬ್ಬ ನಂಜುಂಡಪ್ಪ ತಂದೆ ಮುನಿಯಪ್ಪರವರು ನನ್ನ ತಂದೆ ಹಾಗೂ ಇನ್ನೊಬ್ಬ ಸಾಕ್ಷಿ ಮುನಿಯಪ್ಪ ಎಲ್ಲಾ ಸ್ನೇಹಿತರು ಎಂದರೆ ಇಲ್ಲ ಎನ್ನುತ್ತಾರೆ. ಅವರು ಸ್ನೇಹಿರಾದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಐಟಂ ನಂಬರ್ 7 ಸ್ವತ್ತು ಸಾಕ್ಷಿದಾರರಾದ ಎಂ ನಂಜುಂಡಪ್ಪ ತಂದೆ ಮುನಿಯಪ್ಪ ರವರಿಗೆ ಸೇರಿದ ಸ್ವತ್ತು ಎಂದರೆ ಸರಿ ,ಸದರಿ ಸ್ವತ್ತು ಅದಲು ಬದಲಾಗಿರುತ್ತದೆ ಎನ್ನುತ್ತಾರೆ. ಆ ರೀತಿ ಅದಲು ಬದಲಾಗಿರುವುದು ನನಗೆ ಯಾವಾಗ ತಿಳಿದಿರುತ್ತದೆ ಎಂದರೆ

ಪಹಣಿಯಲ್ಲಿ ಬೆಳೆ ಸಮೀಕ್ಷೆ ಮಾಡುವಾಗ ನೋಡಿ ಹೇಳಿದ್ದಕ್ಕೆ ತಿಳಿದುಬಂದಿರುತ್ತದೆ ಎನ್ನುತ್ತಾರೆ. ಬೆಳೆ ಸಮೀಕ್ಷೆ ಮಾಡಲು ಯಾವಾಗ ಬಂದಿದ್ದರು ಎಂದರೆ ವರ್ಷಕ್ಕೆ ಮೂರು ಸಾರಿ ಬರುತ್ತಾರೆ ಯಾವಾಗ ಎಂದು ನೆನಪಿಲ್ಲ ಎನ್ನುತ್ತಾರೆ. ನನ್ನ ಯಜಮಾನರ ವಿದ್ಯಾಭ್ಯಾಸ ಏನು ಎಂದರೆ ಟಿಸಿಎಚ್ ಮಾಡಿದ್ದರು ಎನ್ನುತ್ತಾರೆ. ಈ ಕೇಸಿನ 1 ನೇ ಪ್ರತಿವಾದಿ ನಂಜುಂಡಪ್ಪ ಅವಿದ್ಯಾವಂತರು ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಯಜಮಾನರು ವಿದ್ಯಾವಂತರಾದ್ದರಿಂದ ಮನೆ ಉಸ್ತುವಾರಿಕೆಯನ್ನು 1 ನೇ ಪ್ರತಿವಾದಿ ಅಡಿಯಲ್ಲಿ ಅವರು ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ಮಾಡುತ್ತಿದ್ದರು ಎನ್ನುತ್ತಾರೆ. ವಿಭಾಗ ಪತ್ರ ಆಗುವ ಸಮಯದಲ್ಲಿ ಈ ಕೇಸಿನ 4 ನೇ ಪ್ರತಿವಾದಿ ರೂಪ ವಾದಿಗಳ ಮನೆ ಶ್ರೀನಿವಾಸಪುರದಲ್ಲಿ ವಿದ್ಯಾಭ್ಯಾಸ ಮಾಡಿಕೊಂಡಿದ್ದರು ಎಂದರೆ ನೆನಪಿಲ್ಲ ಎನ್ನುತ್ತಾರೆ. 4 ನೇ ಪ್ರತಿವಾದಿ ನನ್ನ ಯಜಮಾನರು ಮತ್ತು 1 ನೇ ಪ್ರತಿವಾದಿಯ ಮಾರ್ಗದರ್ಶನದಲ್ಲಿ ವಾದಿಗಳ ಮನೆಯಲ್ಲಿ ವಿದ್ಯಾಬಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.
ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್